ಶ್ರೀ ಆರ್.ವಿ. ದೇಶಪಾಂಡೆ : ಐಎಎಸ್ ಅಧಿಕಾರಿಗಳಿಲ್ಲ ಕುಳಿತು ಬಜೆಟ್ ತಯಾರಿಸುತ್ತಿರಬಹುದು.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಐ.ಎ.ಎಸ್ ಅಧಿಕಾರಿಗಳಿಲ್ಲ, ಅಲ್ಲಿ ಮಂತ್ರಿಗಳು ಬಾಯಿಗೆ ಬಂದಂತೆ ಮಾತಾಡುತ್ತಾರೆ. ನಿಮಗೆ ಗಂಡಸ್ತನ ಇಲ್ಲ ನಿರ್ವೀರ್ಯರು ಎಂದು ಏನೇನೋ ಹುಚ್ಚುಚ್ಚಾಗಿ ಹೇಳುತ್ತಾರೆ. ಕೆಲವು ಮಂತ್ರಿಗಳಿಗೆ ಹುಚ್ಚು ಹಿಡಿದಿದೆಯೋ, ಏನು ಮಾತನಾಡುತ್ತಾರೊ ನಮಗಂತೂ ಗೊತ್ತಾಗುತ್ತಿಲ್ಲ.

ಶ್ರೀ ಎಂ.ಎಸ್. ಪಾಟೀಲ್ : ಆ ಸಭೆಯಲ್ಲಿನ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ಏಕೆ ಮಾಡಬಾರದು

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಂತ್ರಿಗಳು ಇರುವುದು ಕೇವಲ ವಿಧಾನ ಪರಿಷತ್ತಿಗೇ ಅಲ್ಲ, ಈ ಸದನಕ್ಕೂ ಮಂತ್ರಿಗಳು.

(ಗೊಂದಲ)

ಉಪಾಧ್ಯಕ್ಷರು : ಶ್ರೀಮತಿ ಚಂದ್ರಪ್ರಭಾ ಅರಸ್ ಅವರೇ, ನೀವು ಮುಂದುವರೆಸಿ.

ಶ್ರೀ ವಾಟಾಳ್ ನಾಗರಾಜ್ : ಏಕೆ ಮಾತಾಡುತ್ತೀರಿ, ಪ್ರತಿಭಟನೆ ಮಾಡಿ.

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯಾ : ಸರ್ಕಾರದ ಬೇಜವಾಬ್ದಾರಿತನ ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಮಾನ್ಯ ಸದಸ್ಯರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಅವರು ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ : ಒಬ್ಬ ಐಎಎಸ್ ಅಧಿಕಾರಿ ಇದ್ದಾರೆಯೇ? ಮಂತ್ರಿಗಳು. ಅಧಿಕಾರಿಗಳು ಬರುವವರೆಗೆ ನಾನು ಧರಣಿ ಕುಳಿತ್ತಿರುತ್ತೇನೆ. ಶ್ರೀಮತಿ ಚಂದ್ರಪ್ರಭಾ ಅರಸ್ ಅವರಿಗೆ ಕೈಮುಗಿದು ಹೇಳುತ್ತೇನೆ, ದಯಮಾಡಿ ಹೋಗಿ ಪ್ರತಿಭಟಿಸಿ

(ಗೊಂದಲ)

ಶ್ರೀ ಟಿ.ಎಂ. ಮಂಜುನಾಥ್ : ಮಾನ್ಯ ಉಪಾಧ್ಯಕ್ಷೆಯವರೆ, ರಾಜ್ಯಪಾಲರು ನಮ್ಮ ರಾಜ್ಯಕ್ಕೆ ಕೊಟ್ಟಿರತಕ್ಕ ಈ ಒಂದು ಮಾತನ್ನು ಇವತ್ತು ನಾವು ಪ್ರತಿಪಾದನೆ ಮಾಡಿ ಆಳತಕ್ಕಂಥ ಒಂದು ಪಕ್ಷ ನಾವು ಭಾಷಣ ಮಾಡಬೇಕಾಗಿದ್ದರೆ ಕರ್ನಾಟಕದ ಇತಿಹಾಸದಲ್ಲಿ ಯಾವೊತ್ತೂ ಸಹ ವಿರೋಧ ಪಕ್ಷದವರನ್ನು ಬಿಟ್ಟು ಮಾಡತಕ್ಕಂಥದ್ದು ಒಳ್ಳೆಯ ಸಂಪ್ರದಾಯ ಅಲ್ಲ, ಅವರೂ ಇರಬೇಕು. ಅವರು ಇದ್ದು ವಿಚಾರ ವಿನಿಮಯ ಮಾಡಿ ಸಲಹೆಗಳನ್ನು ಕೊಡತಕ್ಕಂಥ ಒಂದು ಸಂಪ್ರದಾಯವನ್ನು ಸ್ವಾತಂತ್ರ್ಯ ಬಂದ ಮೇಲೆ ಈ ಒಂದು ವಿಧಾನ ಸಭೆ ಬಂದ ಮೇಲೆ ಬಂದಿರತಕ್ಕ ಈ ಒಂದು ಸಂಪ್ರದಾಯವನ್ನು ಮುರಿಯುವುದು ಬೇಡ. ತಾವು ದಯಮಾಡಿ ಅವರನ್ನು ಕರೆಸಿ. ಅವರು ಈ ಸಭೆಗೆ ಬಂದು ಈ ಚರ್ಚೆಯಲ್ಲಿ ಪಾಲುಗೊಳ್ಳತಕ್ಕಂಥ ಅವಕಾಶವನ್ನು ತಾವು ಮಾಡಿಕೊಟ್ಟರೆ ಒಳ್ಳೆಯ ಸಂಪ್ರದಾಯವಾಗುತ್ತದೆ. ಈ ಒಂದು ಅಭಿಪ್ರಾಯವನ್ನು ನಾನು ವ್ಯಕ್ತಮಾಡುತ್ತೇನೆ. ದಯಮಾಡಿ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಕೇಳಿ ಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು : ಇದು ಪಾಯಿಂಟ್ ಆಫ್ ಆರ್ಡರ್ ಅಲ್ಲ.